ದಿನಾಂಕ: 04.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು - ಶ್ರೀ ಟಿ.ಎಸ್. ಆರ್ ವಕೀಲರಿಂದ 1 ನೇ ಪ್ರತಿವಾದಿ ಪರ

ನಿಪಿ-12 ರಲ್ಲಿ ನಾನು ಬಾಕಿ ಹಣ ನೀಡಲು 2 ತಿಂಗಳು ಕಾಲಾವಕಾಶ ಬೇಕೆಂದು ತಿಳಿಸಿ ನಮೂದು ಮಾಡಿಸಿರುತ್ತೇನೆ. ಸದರಿ ಸ್ವತ್ತನ್ನು ಅವರು ಮಗಳ ಮದುವೆ ಮತ್ತು ಸಾಲ ತೀರಿಸಲು ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ ಎನ್ನುವರು. 2 ತಿಂಗಳು ಕಾಲ 1 ನೇ ಪ್ರತಿವಾದಿ ನಮೂದು ಮಾಡಿಸಿರುತ್ತಾರೆ ಎಂದರೆ ಸರಿ.

ದಿನಾಂಕ 10-8-2016 ರ ಚೆಕ್ ನಂಬರು 196720 1 ನೇ ಪ್ರತಿವಾದಿಗೆ ನೀಡಿರುವುದು ನಗದಾಗಿ ರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು 1 ನೇ ಪ್ರತಿವಾದಿಯ ಬ್ಯಾಂಕ್ ಯೂನಿಯನ್ ಬ್ಯಾಂಕ್ ನೊಂದಿಗೆ ವಿಲೀನವಾಗುತ್ತಿದ್ದ ಕಾರಣ ನಗದೀಕರಣವಾಗಲಿಲ್ಲ ಎನ್ನುವರು. 2016 ರಲ್ಲಿ ನೋಟುಗಳು ಸರಕಾರದಿಂದ ಅಮಾನ್ಯಗೊಂಡಿತ್ತು ಎಂದರೆ ಸರಿ. ನಾನು ಮನೆ ಕಟ್ಟುವ ಸಲುವಾಗಿ ದಾವಾ ಸ್ವತ್ತನ್ನು ಖರೀದಿ ಮಾಡಲು ಮುಂದಾಗಿರುತ್ತೇನೆ. ಸದರಿ ಸ್ವತ್ತಿನ ಮೇಲೆ ಖರೀದಿ ಸಾಲ ಪಡೆಯಲು ಮುಂದಾಗಿದ್ದೀರಾ ಎಂದರೆ ಸಾಕ್ಷಿ ಬ್ಯಾಂಕಿನವರು ಸಾಲ ನೀಡುವುದಿಲ್ಲ ಎಂದು ಹೇಳಿರುತ್ತಾರೆ ಖಾಸಗಿ ಸಂಸ್ಥೆಗಳಲ್ಲಿ ಬಡ್ಡಿ ಹೆಚ್ಚಾದ ಕಾರಣ ನಾನು ಸಾಲ ತೆಗೆದಿರುವುದಿಲ್ಲ ಎನ್ನುವರು.

ನಾನು ಒಂದು ಅಥವಾ ಎರಡು ಲಕ್ಷ ರೂ ಹಣವನ್ನು ನನ್ನ ಸ್ನೇಹಿತನಾದ ಜಗದೀಶ್ ರವರ ಖಾತೆಯಿಂದ 1 ನೇ ಪ್ರತಿವಾದಿಗೆ ಕಳುಹಿಸಿ ಕೊಟ್ಟಿರುತ್ತೇನೆ. ನಾನು ಜಗದೀಶ್ ರವರಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಲು ಒಪ್ಪಂದ ಮಾಡಿಕೊಂಡು ಅವರ ಕಡೆಯಿಂದ ಮುಂಗಡ ಹಣ ಪಡೆದು ಕೊಂಡು 1 ನೇ ಪ್ರತಿವಾದಿಗೆ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಒಪ್ಪಂದದ ಪ್ರಕಾರ 2 ತಿಂಗಳ ಒಳಗಾಗಿ ಕ್ರಯದ ಪೂರ್ತಿ ಹಣ ನೀಡಿಲ್ಲ ಎಂದರೆ ಸರಿ.

ನಾನು ಕ್ರಯದ ಸಮಯದಲ್ಲಿ ಹಣ ನೀಡದ ಕಾರಣ 1 ನೇ ಪ್ರತಿವಾದಿಯ ಮದುವೆ ಮುಂದೂಡಲಾಗಿತ್ತು ಮತ್ತು ದಿನಾಂಕ 4-12-2016 ರಲ್ಲಿ ಆಗಿರುತ್ತದೆ ಎಂದರೆ ಗೊತ್ತಿಲ್ಲ ಎನ್ನುವರು. ಮದುವೆ ಜೂನ್ -2016 ರಲ್ಲಿ ನಿಗದಿಯಾಗಿತ್ತು ಎಂದರೆ ಗೊತ್ತಿಲ್ಲ ಎನ್ನುವರು. ನಾನು ಹಣ ನೀಡದ ಕಾರಣ ತಡವಾಗಿ ಮದುವೆ ಮಾಡಲಾಯಿತು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಬೇರೆ ಕಡೆ ಸಾಲ ಪಡೆದು ಮಗಳ ಮದುವೆ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ ಎನ್ನುವರು.

ದಾವಾ ಸ್ವತ್ತನ್ನು ಖರೀದಿ ಮಾಡುವ ಇಚ್ಛೆ ನನಗಿರಲಿಲ್ಲ ಎಂದರೆ ಸರಿಯಲ್ಲ. ಸೆಪ್ಟಂಬರ್ 2017 ರಲ್ಲಿ ನಾನು 1 ನೇ ಪ್ರತಿವಾದಿ ಬಳಿ ಬಂದು ದಾವಾ ಸ್ವತ್ತು ಖರೀದಿ ಮಾಡಲು ಇಚ್ಛೆ ಇಲ್ಲ ರದ್ದುಪಡಿಸಿ ಮುಂಗಡ ಹಣ ವಾಪಾಸ್ ನೀಡಲು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಸೆಪ್ಟಂಬರ್ 2017 ರ ಕೊನೆಯ ವಾರದಲ್ಲಿ 1 ನೇ ಪ್ರತಿವಾದಿ ಅವರ ಮಗಳ ಒಡವೆಗಳನ್ನು ಗಿರವಿ ಇಟ್ಟು ನನಗೆ ಮುಂಗಡ ಹಣ ವಾಪಾಸು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಣ ಪಡೆದು ಕರಾರು ರದ್ದುಪಡಿಸಿ ಕೊಂಡರೂ ಸಹ ನ್ಯಾಯಾಲಯದಲ್ಲಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ ಇಚ್ಛೆ ಇಲ್ಲದ ಕಾರಣ ದಾವಾ ಸ್ವತ್ತನ್ನು ಬೇರೆಯವರಿಗೆ ಮಾರಾಟ ಮಾಡುತ್ತೇನೆ ಎಂದು 1 ನೇ ಪ್ರತಿವಾದಿ ತಿಳಿಸಿದ್ದರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಮಾರಾಟ ಮಾಡುವ ಇಚ್ಛೆ ನನಗೆ ತಿಳಿದಿತ್ತು ಎಂದರೆ ಸರಿಯಲ್ಲ. ಕ್ರಯದ ಸಮಯಕ್ಕೆ ನಾನು ಕ್ರಯಪತ್ರ ಪಡೆದು ಕೊಳ್ಳದ ಕಾರಣ 1 ನೇ ಪ್ರತಿವಾದಿಗೆ ನಷ್ಟ ಉಂಟಾಗಿರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಕ್ರಯ ಪತ್ರ ಬರೆದುಕೊಡಲು ತಯಾರಿದ್ದರೂ ಸಹ ನಾನು ಕ್ರಯ ಪತ್ರ ಪಡೆದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರು ದಾವಾ ಸ್ವತ್ತಿನ ಮೇಲೆ ಸಾಲ ಪಡೆದಿದ್ದು ಅದನ್ನು ತೀರುವಳಿ ಮಾಡಿರುವುದಿಲ್ಲ ಎನ್ನುವರು.

1 ನೇ ಪ್ರತಿವಾದಿ ಶ್ರೀಗಂಧ ಫೈನಾನ್ಸ್‌ನಲ್ಲಿ ದಾವಾ ಸ್ವತ್ತಿನ ಮೇಲೆ ಸಾಲ ಪಡೆದಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ. ನಾನು ದಾವಾ ಸ್ವತ್ತನ್ನು ಖರೀದಿ ಮಾಡಲು ಎಂದಿಗೂ ಇಚ್ಛೆ ಇರಲಿಲ್ಲ ಮತ್ತು ಆ ಸ್ವತ್ತು ನನಗೆ ಬೇಕಾಗಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ